ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
**KARNATAK UNIVERSITY DHARWAD**
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
**EXAMINATION SECTION**
Confidential Branch, 2nd Floor, Examination Bhavan

Azadi Ka Amrit Mahotsav

**Website:** www.kud.ac.in
**e-mail:** confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2024/ 197 ದಿನಾಂಕ : 13.11.2024

## ಸುತ್ತೋಲೆ

**ವಿಷಯ:**- ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ ಡಿಸೆಂಬರ-2024ರಲ್ಲಿ ಜರುಗಲಿರುವ ಸ್ನಾತಕ **1ನೇ** ಸೆಮ್ ರಿಪಿಟರ್ಸ್ **3 ಮತ್ತು 5ನೇ** ಸೆಮ್ ರೆಗ್ಯೂಲರ್/ ರಿಪಿಟರ್ಸ್ ಸೆಮಿಸ್ಟರ್ ಪರೀಕ್ಷಾ ಪೂರ್ವ ತಯಾರಿ ಕುರಿತು.

*****

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಯಪಡಿಸುವುದೇನೆಂದರೆ, ಸನ್ **2024-25ನೇ** ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಎಲ್ಲ ಸ್ನಾತಕ ಪದವಿಯ **1ನೇ** ಸೆಮ್ ರಿಪಿಟರ್ಸ್ **3 ಮತ್ತು 5ನೇ** ಸೆಮ್ ರೆಗ್ಯೂಲರ್/ ರಿಪಿಟರ್ಸ್ ಸೆಮಿಸ್ಟರ್ ಪದವಿ ಪರೀಕ್ಷಾ ಪೂರ್ವ ಸಿದ್ದತೆಯನ್ನು ಈ ಕೆಳಗಿನಂತೆ ಮಾಡಿಕೊಳ್ಳಲು ಸಂಬಂಧಪಟ್ಟ ಪ್ರಾಚಾರ್ಯರು ತತ್‌ಕ್ಷಣ ಕೈಗೊಳ್ಳುವುದು. (NEP (Rev) **1ನೇ** ಸೆಮಿಸ್ಟರ್‌ನ ಪರೀಕ್ಷೆಯ ಸುತ್ತೋಲೆಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.)

1. 2023-24 ಸಾಲಿನ 2, 4ನೇ ಸೆಮಿಸ್ಟರ್ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ಡೌನ್‌ಲೋಡ್(Download) ಬಗ್ಗೆ ಖಚಿತಪಡಿಸಿಕೊಳ್ಳುವುದು ಪ್ರವೇಶ ಪತ್ರದ ಪ್ರಕ್ರಿಯೆ ಹಿಂಬಾಕಿ ಇದ್ದಲ್ಲಿ ಸದರ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

2. ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ **2024-25ನೇ** ಸಾಲಿನ **2ನೇ ಸೆಮಿಸ್ಟರ್** ವಿದ್ಯಾರ್ಥಿಗಳನ್ನು **3ನೇ ಸೆಮಿಸ್ಟರ್** ತರಗತಿಗೆ ಹಾಗೂ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು **5ನೇ** ಸೆಮಿಸ್ಟರ್ ತರಗತಿಗೆ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ ಪ್ರಮೋಟ್Promote ಮಾಡುವುದು. ಸದರಿ ಪ್ರಕ್ರಿಯೆಯನ್ನು ದಿನಾಂಕ:**15.11.2024** ರಿಂದ ಪ್ರಾರಂಭಿಸುವುದು.

3. Promote ಗೊಂಡ ವಿದ್ಯಾರ್ಥಿಗಳು UUCMS ತಂತ್ರಾಂಶದ ಮುಖಾಂತರ ಕೋರ್ಸು ನೊಂದಣಿ ಮಾಡಿಕೊಳ್ಳುವುದು, ಹಾಗೂ ದಿನಾಂಕ:**21.11.2024ರ** ಒಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

4. ಕೋರ್ಸ ನೊಂದಣಿಗೊಂಡ ವಿದ್ಯಾರ್ಥಿಗಳನ್ನು ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಳಿಸುವುದು. ಸದರಿ ಪ್ರಕ್ರಿಯೆಯನ್ನು ದಿನಾಂಕ:**24.11.2024ರ** ಒಳಗೆ ಪೂರ್ಣಗೊಳಿಸುವುದು.

5. ಕೋರ್ಸ ನೊಂದಣಿಗೊಂಡ ಹಾಗೂ ಪ್ರಾಚಾರ್ಯರರಿಂದ UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಂಡ ವಿದ್ಯಾರ್ಥಿಗಳು **1ನೇ** ಸೆಮ್ ರಿಪಿಟರ್ಸ್ **3 ಮತ್ತು 5ನೇ** ಸೆಮ್ ರೆಗ್ಯೂಲರ್/ ರಿಪಿಟರ್ಸ್ ಸೆಮಿಸ್ಟರ್‌ಗೆ ಪರೀಕ್ಷಾ ಅರ್ಜಿಯನ್ನು UUCMSತಂತ್ರಾಂಶದ ಮುಖಾಂತರ ಭರ್ತಿ ಮಾಡುವುದು.

ಸದರಿ ಪ್ರಕ್ರಿಯೆಯನ್ನು ಕ.ವಿ.ವಿ.ಯ ಸುತ್ತೋಲೆಯ ಪ್ರಕಾರ (ಶೀಘ್ರದಲ್ಲಿ ಪ್ರಕಟಿಸಲಾಗುವುದು) ಪರೀಕ್ಷಾ ಅರ್ಜಿಯನ್ನು ದಿನಾಂಕ:**25.11.2024** ರಿಂದ ಪ್ರಾರಂಭಿಸಿ ದಿನಾಂಕ:**15.12.2024ರ** ಒಳಗೆ ಪೂರ್ಣಗೊಳಿಸುವುದು.

ಪು.ತಿ.ನೋ

6. UUCMSತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ನಮೂದಿಸುವ ಪ್ರಕ್ರಿಯೆಯನ್ನು ದಿನಾಂಕ: **20.12.2024**ರ ಒಳಗೆ ಪೂರ್ಣಗೊಳಿಸುವುದು.

7. ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ **3 & 5ನೇ** ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿದ ಹಾಗೂ ಶೇಕಡಾ 75%ರಷ್ಟು ಹಾಜರಾತಿ ಪೂರೈಸಿದ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ಡೌನ್‌ಲೋಡ್Download ಮಾಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು. ಪ್ರವೇಶ ಪತ್ರದ ಪ್ರಕ್ರಿಯೆ ಹಿಂಬಾಕಿ ಇದ್ದಲ್ಲಿ ಸದರ ಪ್ರಕ್ರಿಯೆಯನ್ನು ನಿಗದಿ ಪಡಿಸಿದ ದಿನಾಂಕದೊಳಗಾಗಿ ಪೂರ್ಣಗೊಳಿಸುವುದು.

13/11

ಕುಲಸಚಿವರು(ಮೌಲ್ಯಮಾಪನ)

ಗೆ, ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು.

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಡಾ. ಜಿ.ಎಸ್. ಹಡಗಲಿ,.ನಿರ್ದೇಶಕರು, ಯುಯುಸಿಎಮ್‌ಎಸ್ ಘಟಕ, ಕ.ವಿ.ವಿ. ಧಾರವಾಡ.
2. ಸಿಸ್ಟಮ್‌ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ಉಪಕುಲಸಚಿವರು /ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳು/ ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಐಟಿ ವಿಭಾಗ, ಕ.ವಿ.ವಿ. ಸದರ ಸುತ್ತೋಲೆಯನ್ನು ಕ.ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.